**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.**

**ಸಿಸಿ.**

| | |
|---|---|
| **ಸಾಕ್ಷಿದಾರರ ಹೆಸರು** | **ರಾಘವೇಂದ್ರ ಬಿ.ಆರ್.** |
| **ತಂದೆಯ ಹೆಸರು** | **ಬಿ. ರಂಗಪ್ಪ** |
| **ವಯಸ್ಸು** | **41 ವರ್ಷ** |
| **ಉದ್ಯೋಗ** | **ಪಿ.ಐ. ಯಶವಂತಪುರ ಸಂಚಾರ ಪಿ.ಎಸ್. ಬೆಂಗಳೂರು.** |
| **ವಾಸ** | **ಸಿದ್ದೇಶ್ವರ ಲೇಔಟ್, ಬೆಂಗಳೂರು.** |
| **ಪ್ರಮಾಣೀಕರಿಸಿದ ದಿನಾಂಕ** | **19/07/2023** |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು ನವೆಂಬರ್ 2011 ರಿಂದ ಸೆಪ್ಟಂಬರ್ 2013 ರವರೆಗೆ ಆರ್,ಎಮ್,ಸಿ. ಯಾರ್ಡ್ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 25/05/2012 ರಂದು ನಾನು ಠಾಣೆಯಲ್ಲಿದ್ದಾಗ ಚಾಸ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದುಕೊಂಡು ಠಾಣಾ ಮೊ.ಸಂ. 123/2012 ರಲ್ಲಿ ಪ್ರಕರಣವನ್ನು ದಾಖಲಿಸಿ, ಪ್ರ.ವ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತೇನೆ. ನಿಪಿ-1 ಪಿರ್ಯಾದಿಯಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ-1(ಬಿ) ಎಂದು ಗುರುತಿಸಲಾಯಿತು. ಪ್ರ.ವ ವರದಿಯನ್ನು ನಿಪಿ-29 ಎಂದು, ನನ್ನ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು.

2. ಫಿರ್ಯಾದಿದಾರರಿಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸುವಂತೆ ನೋಟಿಸ್ ನೀಡಿರುತ್ತೇನೆ. ದಿನಾಂಕ 21/06/2012 ರಂದು ಚಾಸ-1 ರವರು ಠಾಣೆಗೆ ಹಾಜರಾಗಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪಾಲುಗಾರಿಕಾ ಪತ್ರ ಮತ್ತು ಪಾಲುಗಾರಿಕಾ ರದ್ದತಿ ಪತ್ರಗಳ ಜರಾಕ್ಸ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ 16/08/2012 ರಂದು ಚಾಸ-1 ರವರು ಮರುಹೇಳಿಕೆಯನ್ನು ಮತ್ತು ಚಾಸ-2 ಮತ್ತು 5 ರವರ ಹೇಳಿಕೆಗಳನ್ನು ನೀಡಿದ್ದು, ಅವುಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿನಾಂಕ 29/09/2012 ರಂದು ಆರೋಪಿ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು, ಆರೋಪಿಯನ್ನು ದಸ್ತಗಿರಿ ಮಾಡಿ, ನ್ಯಾಯಾಲಯದ ಜಾಮೀನಿನ ಪ್ರಕಾರ ಬಿಡುಗಡೆ ಮಾಡಿರುತ್ತೇನೆ. ಸದರಿ ಆರೋಪಿಯನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ.

3. ಪಾಲುಗಾರಿಕಾ ಪತ್ರ ಮತ್ತು ರದ್ದತಿ ಪತ್ರವನ್ನು ಹಾಜರುಪಡಿಸುವಂತೆ ಆರೋಪಿಗೆ ನೋಟಿಸ್ ಜಾರಿ ಮಾಡಿರುತ್ತೇನೆ. ದಿನಾಂಕ 21/06/2013 ರಂದು ಚಾಸ-1 ರವರು ಪಾಲುಗಾರಿಕಾ ಪತ್ರದ ಮೂಲ ಪತ್ರವನ್ನು ಹಾಜರು ಪಡಿಸಿದ್ದು, ಅದನ್ನು ಚಾಸ-3 ಮತ್ತು 4 ರವರ ಸಮಕ್ಷಮ ಅಮಾನತ್ತುಪಡಿಸಿಕೊಂಡು, ಕಡತಕ್ಕೆ ಅಳವಡಿಸಿಕೊಂಡು, ಅದನ್ನು ಮಾಲುಪಟ್ಟಿ ಸಂಖ್ಯೆ.76/2013 ರಲ್ಲಿ ನಮೂದಿಸಿ ಸೂಕ್ತ ಆದೇಶಕ್ಕಾಗಿ ನ್ಯಾಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತೇನೆ. ಪಾಲುಗಾರಿಕಾ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಯಿತು. ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅಮಾನತ್ತು ಪಂಚನಾಮೆಯ ಕಾರ್ಬನ ಪ್ರತಿಯನ್ನು ನೋಡಿ ಗುರುತಿಸಿದ್ದು, ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು, ನಿಪಿ-30 ಎಂದು, ಸಾಕ್ಷಿಯ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಯಿತು.

4. ದಿನಾಂಕ 25/07/2013 ರಂದು ಆರೋಪಿಯು ಪಾಲುಗಾರಿಕಾ ಪತ್ರದ ಜರಾಕ್ಸ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ಅದನ್ನು ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ 25/07/2013 ರಂದು ಚಾಸ-1, ಚಾಸ- 2 ಮತ್ತು ಆರೋಪಿಯ ತಲಾ 6 ಸಹಿಗಳನ್ನು ತಲಾ 6 ಬಿಳಿ ಹಾಳೆಗಳ ಮೇಲೆ ಪಡೆದುಕೊಂಡಿರುತ್ತೇನೆ.

5. ಚಾಸ-1 ರವರ ಮಾದರಿ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-5 ರಿಂದ 11 ಎಂದು ಗುರುತಿಸಲಾಗಿದೆ. ಚಾಸ-1 ರವರ ಕೈಬರಹವನ್ನು ಆಂಗ್ಲ ಭಾಷೆಯಲ್ಲಿಪಡೆದಿದ್ದು, ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-11 ರಿಂದ 16 ಎಂದು ಗುರುತಿಸಲಾಗಿದೆ.

6. ಚಾಸ-2 ರವರ ಮಾದರಿ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-17 ರಿಂದ 22 ಎಂದು ಗುರುತಿಸಲಾಗಿದೆ. ಚಾಸ-2 ರವರ ಕೈಬರಹವನ್ನು ಆಂಗ್ಲ ಭಾಷೆಯಲ್ಲಿಪಡೆದಿದ್ದು, ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-23 ರಿಂದ 28 ಎಂದು ಗುರುತಿಸಲಾಗಿದೆ.

7. ಆರೋಪಿಯ ಮಾದರಿ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-31 ರಿಂದ 36 ಎಂದು ಗುರುತಿಸಲಾಯಿತು. ಆರೋಪಿಯ ಕೈಬರಹವನ್ನು ಆಂಗ್ಲ ಭಾಷೆಯಲ್ಲಿ ಪಡೆದಿದ್ದು, ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-37 ರಿಂದ 42 ಎಂದು ಗುರುತಿಸಲಾಯಿತು.

8. ದಿನಾಂಕ 10/09/2013 ರಂದು ಪಾಲುಗಾರಿಕಾ ಮೂಲ ಪತ್ರ, ರದ್ದತಿ ಪತ್ರದ ಜರಾಕ್ಸ ಪ್ರತಿ , ಚಾಸ-1 , ಚಾಸ-2 ಹಾಗೂ ಆರೋಪಿಯ ಮಾದರಿ ಸಹಿಗಳು ಮತ್ತು ಕೈಬರಹಗಳನ್ನು ತಜ್ಞರ ಪರೀಕ್ಷೆಗಾಗಿ ವಿಧಿವಿಜ್ಞಾನ

ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ 11/09/2013 ರಂದು ನನಗೆ ವರ್ಗಾವಣೆಯಾಗಿದ್ದರಿಂದ ಚಾಸ-7 ರವರಿಗೆ ವಹಿಸಿ ಕೊಟ್ಟಿರುತ್ತೇನೆ.

**ಪಾಟೀ ಸವಾಲು: ಶ್ರೀ. ಸಿ.ಪಿ.ಪಿ. ವಕೀಲರಿಂದಃ**

9. ಫಿರ್ಯಾದಿದಾರರು ರದ್ದತಿ ಪತ್ರ ಮತ್ತು ಪಾಲುಗಾರಿಕೆಯ ಪುನಃರಚನೆಯ ಪತ್ರಗಳನ್ನು ಹಾಜರು ಪಡಿಸಿಲ್ಲ. ರದ್ದತಿ ಪತ್ರ ಮತ್ತು ಪಾಲುಗಾರಿಕೆಯ ಪುನಃರಚನೆಯ ಪತ್ರಗಳನ್ನು ಹಾಜರು ಪಡಿಸುವಂತೆ ನಾನು ಫಿರ್ಯಾದಿಗಾಗಲೀ ಅಥವಾ ಆರೋಪಿಗಾಗಲೀ ನೋಟಿಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳು ಆರೋಪಿಯ ಬಳಿ ಇರುತ್ತವೆ ಎಂದು ಫಿರ್ಯಾದಿಯವರು ಹೇಳಿರುತ್ತಾರೆ. ಸದರಿ ದಾಖಲೆಗಳನ್ನು ಪಡೆಯುವ ಸಲುವಾಗಿ ಆರೋಪಿಯ ಮನೆ ಮತ್ತು ವ್ಯಾಪಾರದ ಸ್ಥಳದಲ್ಲಿ ಶೋಧನೆ ಮಾಡಲು ತೊಂದರೆ ಇರಲಿಲ್ಲ. ಆರೋಪಿಯ ವ್ಯಾಪಾರ ಸ್ಥಳದಲ್ಲಿ ನಾನು ಶೋಧನೆ ಮಾಡಿದೆ, ಅಂತಹ ಯಾವುದೇ ದಾಖಲೆಗಳು ಕಂಡು ಬರಲಿಲ್ಲ. ಆರೋಪಿಯು ಅಂತಹ ಯಾವುದೇ ದಾಖಲೆಗಳನ್ನು ಹೊಂದಿಲ್ಲದೆ ಇರುವುದರಿಂದ ಆತನ ವ್ಯಾಪಾರದ ಸ್ಥಳದಲ್ಲಿ ನಮಗೆ ದಾಖಲೆಗಳು ದೊರೆಯಲ್ಲಿ ಎಂದರೆ ಸರಿಯಲ್ಲ. ಫಿರ್ಯಾದಿದಾರರ ಮಾತು ಕೇಳಿಕೊಂಡು ಸುಳ್ಳು ಪ್ರಕರಣವನ್ನು ದಾಖಲೆಸಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದುದಾರರು ಒಂದು ವರ್ಷ ತಡವಾಗಿ ಪಾಲುಗಾರಿಕೆ ಪತ್ರವನ್ನು ಹಾಜರುಪಡಿಸಲು ಕಾರಣ ಏನು ಎಂಬ ಪ್ರಶ್ನೆಗೆ ಫಿರ್ಯಾದಿದಾರರು ಚುನಾವಣೆಗೆ ಸ್ಪರ್ಧಿಸಿದ್ದರು ಎಂದು ಹೇಳಿದ್ದರು.

10. ಆರೋಪಿಯು ಚಾಸ-1, 2 ಮತ್ತು 5 ರವರ ವಿರುದ್ದ ಓ.ಎಸ್. ನಂ. 3205/2012 ರಂತೆ ಸಿವಿಲ್ ದಾವೆಯನ್ನು ಹೂಡಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಚಾಸ-1, 2 ಮತ್ತು 5 ರವರಿಗೆ ಅನುಕೂಲವಾಗಲೀ ಎಂದು ನಾನು ಚಾಸ-1 ರವರ ಪ್ರಭಾವಕ್ಕೊಳಗಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ

ಸರಿಯಲ್ಲ. ನಾನು ಫಿರ್ಯಾದಿಗೆ ಅನುಕೂಲವಾಗಲೀ ಎಂದು ದಾಖಲೆಗಳನ್ನು ಮತ್ತು ಪಂಚನಾಮೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿಯವರ ಮರು ಹೇಳಿಕೆ ಮತ್ತು ಚಾಸಾ-2 ರಿಂದ 5 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**